# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 808 |
| ಸದಸ್ಯರ ಹೆಸರು | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸುವ ದಿನಾಂಕ | 13-03-2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ಅಬಕಾರಿ ನಿರೀಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಒಟ್ಟು 22 ಅಬಕಾರಿ ನಿರೀಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. |
| ಆ) | ಸ್ಥಳ ನಿರೀಕ್ಷಣೆಯಲ್ಲಿರುವ ಅಬಕಾರಿ ನಿರೀಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; (ಸ್ಥಳಗಳ ವಿವರ ನೀಡುವುದು) | 19 ಅಬಕಾರಿ ನಿರೀಕ್ಷಕರುಗಳು ಕೇಂದ್ರ ಕಛೇರಿಯಲ್ಲಿ ಸ್ಥಳ ನಿರೀಕ್ಷಣೆಯಲ್ಲಿರುತ್ತಾರೆ. ಖಾಲಿ ಇರುವ ಅಬಕಾರಿ ನಿರೀಕ್ಷಕರ ಸ್ಥಳ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಇ) | ಘನ ನ್ಯಾಯಾಲಯದ ಆದೇಶದಂತೆ ರಾಜ್ಯದ ಪ್ರಾಥಮಿಕ ಡಿಸ್ಟಿಲರಿಗಳಲ್ಲಿ ಅಬಕಾರಿ ಇಲಾಖೆಯ ಹುದ್ದೆಗಳನ್ನು ಮರು ನಿಯೋಜಿಸಲು ಸೂಚಿಸಿದ್ದರೂ ಇಲ್ಲಿಯವರೆಗೆ ಮಾಡದಿರಲು ಕಾರಣಗಳೇನು; ಮತ್ತು ಎಷ್ಟು ಹುದ್ದೆಗಳನ್ನು ನಿಯೋಜಿಸಬೇಕಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

| | | |
|---|---|---|
| ಈ) | ಕೊಡಗು ಜಿಲ್ಲೆಯ ಕೇರಳ ಅಂತರರಾಜ್ಯ ಗಡಿಭಾಗವಾದ ಕರಿಕೆ ಗ್ರಾಮದಲ್ಲಿ ಅಬಕಾರಿ ಚೆಕ್ ಪೋಸ್ಟ್ ಇಲ್ಲದಿರಲು ಕಾರಣವೇನು; | ಆದೇಶ ಸಂಖ್ಯೆ:ಆಇ 76 ಇಪಿಎಸ್ 2023, ದಿನಾಂಕ:02.01.2025ರಲ್ಲಿ ಕೊಡಗು ಜಿಲ್ಲೆಯ ಮಾಕುಟ್ಟ ತನಿಖಾ ಠಾಣೆಯನ್ನು ಮಾರ್ಪಡಿಸಿ ಕರಿಕೆ ಗ್ರಾಮ, ಕರಿಕೆ ತನಿಖಾ ಠಾಣೆಯನ್ನು ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಗಡಿ ಸಂಪರ್ಕಕ್ಕೆ ಹುದ್ದೆಗಳೊಂದಿಗೆ ಸ್ಥಳಾಂತರಿಸಿ ಆದೇಶ ಹೊರಡಿಸಲಾಗಿದ್ದು, ಪ್ರಸ್ತುತ ಕರಿಕೆ ಗ್ರಾಮದಲ್ಲಿ ಕರಿಕೆ ತನಿಖಾ ಠಾಣೆಯು ಕಾರ್ಯನಿರ್ವಹಿಸುತ್ತಿದೆ. |
| ಉ) | ರಾಜ್ಯದ ಅಬಕಾರಿ ಇಲಾಖೆಯಲ್ಲಿ ಸನ್ನದುಗಳಿಗೆ ನಿರೀಕ್ಷಿತ ಗುರಿಯನ್ನು ನಿಗಧಿಪಡಿಸಿ ಸನ್ನದುದಾರಿಗೆ ಹೆಚ್ಚು ಮದ್ಯ ಎತ್ತುವಳಿ ಮಾಡಲು ಸೂಚನೆ ನೀಡುತ್ತಿರಲು ಕಾರಣವೇನು? | 2024–25ನೇ ಸಾಲಿಗೆ ರಾಜ್ಯ ಸರ್ಕಾರವು ಅಬಕಾರಿ ಇಲಾಖೆಗೆ ರೂ.38,825 ಕೋಟಿಗಳ ಆರ್ಥಿಕ ರಾಜಸ್ವ ಗುರಿಯನ್ನು ನಿಗದಿಪಡಿಸಲಾಗಿದೆ.<br><br>ಅದರಂತೆ ಜಿಲ್ಲೆಯ ವಿವಿಧ ವಲಯಗಳ ಬೆಳವಣಿಗೆಯ ಸ್ಥಿತಿಗತಿ, ಜನಸಂಖ್ಯೆ, ನಗರೀಕರಣ, ನಗರ ಪಾಲಿಕೆಗಳ ವಸ್ತುಸ್ಥಿತಿ, ಜಿಲ್ಲೆಗಳ ಆರ್ಥಿಕ ಚಟುವಟಿಕೆ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಬೇಡಿಕೆಗನುಗುಣವಾಗಿ ಮಾಹೆಯಲ್ಲಿ ಆಗಬಹುದಾದ ಮದ್ಯ ಮಾರಾಟವನ್ನು ಅಂದಾಜಿಸಿ ಮಾಹೆವಾರು ಜಿಲ್ಲೆಗಳಿಗೆ ಮದ್ಯ ಮಾರಾಟದ ನಿರೀಕ್ಷೆಯನ್ನು ನಿಗದಿಪಡಿಸಲಾಗುತ್ತಿದೆ.<br><br>ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ನಿಗದಿಪಡಿಸುವ ಮದ್ಯದ ನಿರೀಕ್ಷೆಗಳನ್ನು ಅಬಕಾರಿ ಉಪ ಆಯುಕ್ತರು ತಮ್ಮ ಜಿಲ್ಲೆಯ ಅಧೀನ ವಲಯ / ಉಪವಿಭಾಗದ ಕಛೇರಿಗಳಿಗೆ ಮರು ನಿಗದಿಪಡಿಸುತ್ತಾರೆ. ವಲಯ ನಿರೀಕ್ಷಕರು ತಮ್ಮ ವ್ಯಾಪ್ತಿಯ ಸನ್ನದುದಾರರಿಗೆ ಕಳೆದ ವರ್ಷದ ಮಾಹೆಗಳಲ್ಲಿ ಮಾರಾಟ ಮಾಡಲಾದ ಮದ್ಯ ಪೆಟ್ಟಿಗೆಗಳ ಆಧಾರದ ಮೇಲೆ ಪ್ರಸ್ತುತ ವರ್ಷದ ಮಾಹೆಗೆ ಮದ್ಯ ಮಾರಾಟವಾಗುವಂತಹ |

| | | |
|---|---|---|
| | | ಬೆಳವಣಿಗೆಯನ್ನು ಅಂದಾಜಿಸಿ ನಿರೀಕ್ಷೆಗಳನ್ನು ನೀಡಲಾಗುತ್ತಿದೆ. ಅದಲ್ಲದೆ, ಅಬಕಾರಿ ಇಲಾಖೆಯಿಂದ ಸಮರ್ಪಕವಾದ ಜಾರಿ ಮತ್ತು ತನಿಖೆ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ನಿಗದಿಪಡಿಸಲಾದ ಆರ್ಥಿಕ ಗುರಿಯನ್ನು ಸಾಧಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. |

ಆಇ 31 ಇಎಲ್‌ಕ್ಯೂ 2025

**(ಆರ್.ಬಿ.ತಿಮ್ಮಾಪುರ)**

ಅಬಕಾರಿ ಸಚಿವರು

# ಅನುಬಂಧ

| ಕ್ರ.ಸಂ | ಜಿಲ್ಲೆಯ ಹೆಸರು | ಅಬಕಾರಿ ನಿರೀಕ್ಷಕರ ವೃಂದದಲ್ಲಿ ಖಾಲಿ ಇರುವ ಕಛೇರಿಯ ವಿವರ |
|---|---|---|
| 1. | ಬೆಂಗಳೂರು ನಗರ ಜಿಲ್ಲೆ-8 | ಮೆ: ಖೋಡೆ ಬ್ರೀವರೀಸ್, ( ಬಿಡಿ ) |
| 2. | ಬಳ್ಳಾರಿ ಜಿಲ್ಲೆ | ಬಳ್ಳಾರಿ ಉಪ ವಿಭಾಗ |
| | | ಇಟ್ಟಿಗೆಹಾಳ್ ತನಿಖಾ ಠಾಣೆ |
| 3. | ಬೀದರ್ ಜಿಲ್ಲೆ | ಗೋರನಹಳ್ಳಿ ತನಿಖಾ ಠಾಣೆ |
| 4. | ಚಾಮರಾಜನಗರ ಜಿಲ್ಲೆ | ನಾಲ್ ರೋಡ್ ತನಿಖಾ ಠಾಣೆ ( ಗರಿಕೆ ಕಂಡಿ) |
| | | ಮೆ: ಎಲ್ ಎನ್ ಬ್ರೀವರೀಸ್ ಪ್ರೈ ಲಿ., |
| 5. | ಚಿಕ್ಕಮಗಳೂರು ಜಿಲ್ಲೆ. | ಕಡೂರು ವಲಯ |
| | | ಮೂಡಿಗೆರೆ ವಲಯ |
| 6. | ಚಿಕ್ಕಬಳ್ಳಾಪುರ ಜಿಲ್ಲೆ. | ಆದಿಗಾನಹಳ್ಳಿ ಕ್ರಾಸ್ ತನಿಖಾ ಠಾಣೆ |
| 7. | ಚಿತ್ರದುರ್ಗ ಜಿಲ್ಲೆ | ಚಿತ್ರದುರ್ಗ ಉಪ ವಿಭಾಗ |
| | | ಮಾದಿಹಳ್ಳಿ ತನಿಖಾ ಠಾಣೆ |
| 8. | ದಕ್ಷಿಣ ಕನ್ನಡ ಜಿಲ್ಲೆ | ಅಬಕಾರಿ ಜಂಟಿ ಆಯುಕ್ತರ ಕಛೇರಿ, ಮಂಗಳೂರು ವಿಭಾಗ |
| 9. | ಕಲಬುರಗಿ ಜಿಲ್ಲೆ | ರಿಬ್ಬನ್‌ಪಲ್ಲಿ ತನಿಖಾ ಠಾಣೆ |
| | | ಅಬಕಾರಿ ಜಂಟಿ ಆಯುಕ್ತರ ಕಛೇರಿ, ಕಲಬುರಗಿ ವಿಭಾಗ |
| 10. | ಹಾಸನ ಜಿಲ್ಲೆ | ಮೆ: ವುಡ್ ಪೆಕ್ಕರ್ ಬ್ರೀವರೀಸ್ ಪ್ರೈ ಲಿ., (ಡಿಡಿ) |
| 11. | ಮಂಡ್ಯ ಜಿಲ್ಲೆ | ನಾಗಮಂಗಲ ವಲಯ |
| | | ಮಂಡ್ಯ ಉಪ ವಿಭಾಗ |
| 12. | ಶಿವಮೊಗ್ಗ ಜಿಲ್ಲೆ | ಸೊರಬ ವಲಯ |
| 13. | ತುಮಕೂರು ಜಿಲ್ಲೆ | ಮೆ: ಕೃಷ್ಣ ಮೃಗ (ಫ್ರೂಟ್) ವೈನ್ ಯಾರ್ಡ್ |
| 14. | ಉತ್ತರ ಕನ್ನಡ ಜಿಲ್ಲೆ | ಶಿರಸಿ ವಲಯ |
| | | ಯಲ್ಲಾಪುರ ವಲಯ |
| | | ಕಾರವಾರ ಉಪ ವಿಭಾಗ |

**ಆಇ 31 ಇಎಲ್‌ಕ್ಯೂ 2025**